
# ಜಾಣ ಮರಿಕಾಗೆ

ಲತಾ ಹೆಗಡೆ

ಕಲೆ: ಸಂತೋಷ್ ಸಸಿಹಿತ್ಲು



ಅಲ್ಲಿತ್ತೊಂದು ದೊಡ್ಡ ಮರ, ಅದರಲ್ಲೊಂದು ಕಾಗೆ ಗೂಡು. ಗೂಡಲ್ಲಿ ಅಮ್ಮ ಕಾಗೆ, ಮರಿ ಕಾಗೆಯೊಂದಿಗೆ ವಾಸವಾಗಿತ್ತು. ದಿನದಿನವೂ ಹುಳ, ಹುಪ್ಪಟೆ, ಕಾಳು ಮುಂತಾದ ತಿನಿಸನ್ನು ತನ್ನ ಉದ್ದದ ಚುಂಚಲ್ಲಿ ಕಚ್ಚಿ ತಂದು ಪುಟ್ಟ ಮರಿಗೆ ತಿನ್ನಿಸಿ ಬೆಳೆಸಿತು. ಗುಂಡಗುಂಡಗೆ ಬೆಳೆಯುತ್ತಿರುವ ಮುದ್ದು ಮರಿಯನ್ನು ಕಂಡಾಗಲೆಲ್ಲ ತಾಯಿಕಾಗೆಗೆ ಬಲೂ ಹೆಮ್ಮೆ. ಮುದ್ದಾಡುವಷ್ಟು ಮುದ್ದು ಉಕ್ಕಿದರೂ ಅದೊಂದು ಕೊರಗು ತಾಯಿಕಾಗೆಯಲ್ಲಿ ಮನೆಮಾಡಿತ್ತು. ಹೆತ್ತವರಿಗೆ ಹೆಗ್ಗಣ ಮುದ್ದು ಎಂಬುದು ನಿಜ. ಆದರೆ ಪ್ರಯತ್ನಿಸಿದರೆ ಯಾವುದೂ ಅಸಾಧ್ಯವಲ್ಲ ಹಾಗಾಗಿ ದಿನದಿನವೂ ಸ್ವಚ್ಛ ನೀರಿನಲ್ಲಿ ಸ್ನಾನ ಮಾಡಿಸಿ ಮರಿ ಕಾಗೆಯನ್ನು ಬದಲಾಯಿಸಿ ಚೆಂದಗೊಳಿಸಬೇಕು; ಇದು ಅಸಾಧ್ಯವೇನಲ್ಲ ಎಂಬುದು ತಾಯಿಕಾಗೆಯ ನಿಲುವಾಗಿತ್ತು. ಅಂತೆಯೇ ಪುಟ್ಟಮರಿ ರೆಕ್ಕೆ ಬಲಿತು ಹಾರುವಂತಾದಾಗ ತಾನಂದುಕೊಂಡದ್ದನ್ನು ಕಾರ್ಯರೂಪಕ್ಕೆ ಇಳಿಸಿಯೇಬಿಟ್ಟಿತು.

ಮರಿ ಕಾಗೆಗೆ ಹಾರುವುದನ್ನು ಕಲಿಸಿದ ನಂತರ ಅದೊಂದು ಶುಭ ಗಳಿಗೆಯಲ್ಲಿ ಸಮೀಪದ ಕೆರೆಗೆ ಕರೆದುಕೊಂಡು ಹೋಯಿತು. ಅಲ್ಲಿ ಪುಟಾಣಿ ಮರಿಗೆ ಮುಳುಗೀ ಮುಳುಗಿ ಸ್ನಾನ ಮಾಡಿಸಿ, ರೆಕ್ಕೆ ಕೊಡವುತ್ತಾ ಮೈ ಒಣಗಿಸಿಕೊಳ್ಳುವುದನ್ನು ಕಲಿಸಿತು. ನಂತರದಲ್ಲಿ ಸಮೀಪದ ಅರಳೀಮರದ ಬುಡದಲ್ಲಿರುವ ದೇವರ ಮೂರ್ತಿಯ ಮುಂದೆ ನಮಸ್ಕರಿಸಲು ಹೇಳಿಕೊಟ್ಟು ತಾನೂ ನಮಸ್ಕರಿಸಿ ತಾನಂದುಕೊಂಡಂತೇ ಮರಿ ಕಾಗೆಯನ್ನು ಚೆಂದಗೊಳಿಸುವಂತೆ ಅತ್ಯಂತ ಭಕ್ತಿಭಾವದಿಂದ ಬೇಡಿಕೊಂಡಿತು. ಆನಂತರ ಆಹಾರವನ್ನು ಕುಕ್ಕೀ ಕುಕ್ಕಿ ಹೆಕ್ಕಿ ತಿನ್ನುವುದನ್ನು ಮರಿಗೆ ರೂಢಿಸಿದ ನಂತರ ಮನಸೋ ಇಚ್ಛೆ ಹಾರಾಡಿ ಮರಿಯೊಟ್ಟಿಗೆ ಕುಣಿದು ಕುಪ್ಪಳಿಸಿತ್ತು. ಸಂಜೆ ಕತ್ತಲಾಗುವ ಸಮಯದಲ್ಲಿ ಹಿಂದಿರುಗಿ ಬೆಚ್ಚಗಿನ ಗೂಡಲ್ಲಿ ಕಣ್ತುಂಬಾ ನಿದ್ರಿಸಿದ್ದವು.

ಇದು ಒಂದು ದಿನದ ಚಟುವಟಿಕೆಯಾಗದೇ ದಿನವೂ ಅದೇ ದಿನಚರಿಯ ಪುನರಾವರ್ತನೆ ಆಗಿತ್ತು. ಅಷ್ಟೇ ಅಲ್ಲದೆ ಸ್ವಚ್ಛ ನೀರೆಲ್ಲಿದೆಯೆಂದು ಹುಡುಕಿ ಆ ಕೆರೆಯಲ್ಲಿ ಮರಿ ಕಾಗೆಯನ್ನು ಮುಳುಗಿಸೀ ಮುಳುಗಿಸಿ ಮತ್ತೆ ಮತ್ತೆ ಸ್ನಾನ ಮಾಡುವಂತೇ ಗಟ್ಟಿಸಿ ಹೇಳುತ್ತಿತ್ತು. ತಾಯಿ ಕಾಗೆ, ಪುಟಾಣಿ ನೀರಲ್ಲಿ ಮುಳುಗಿದಾಗಲೆಲ್ಲಾ ಪರೀಕ್ಷಾ ದೃಷ್ಟಿಯಿಂದ ಗಮನಿಸಿ ಅಸಹನೆಯಿಂದ ಮತ್ತಷ್ಟು ರಭಸದಲ್ಲಿ ನೀರಲ್ಲಿ ಮುಳುಗೇಳಲು ಹೇಳುತ್ತಿತ್ತು! ಮರಿ ಕಾಗೆ ಸ್ನಾನ ಮಾಡಿದಷ್ಟೂ ಸಾಲದು. ಪುಟಾಣಿಗೂ ಅಮ್ಮನ ಈ ಸ್ವಭಾವದಿಂದಾಗಿ ರೋಸಿಹೋಗಿ ಇದೊಂದು ಮುಗಿಯದ ರಗಳೆ ಎಂದೆನ್ನಿಸಿಬಿಟ್ಟಿತು. ಅದೊಂದು ದಿನ ಧೈರ್ಯ ಮಾಡಿ ಕೇಳೇಬಿಟ್ಟಿತು.

'ಅಮ್ಮ! ನನ್ನ ರೆಕ್ಕೆ ಬಲಿತಾಗಿನಿಂದಲೂ ಒಂದು ದಿನವೂ ಬಿಡದೇ ಕೆರೆ, ಹೊಳೆ, ಹಳ್ಳಕೊಳ್ಳ ಅಂತೆಲ್ಲಾ ಕಂಡಕಂಡಲ್ಲಿ ಕರ್ಕೊಂಡು ಬಂದು ಸ್ನಾನ ಮಾಡೋಕೆ ಹೇಳ್ತೀಯಲ್ಲ ಒಂದು ದಿನವೂ ಬಿಡದೇ ಸ್ನಾನ ಮಾಡೋದು, ಅದೂ ನೀ ಹೇಳ್ದಂಗೇ ಮೈ ಉಜ್ಜೀ ಉಜ್ಜಿ, ಮುಳುಗೀ ಮುಳುಗಿ ಸ್ನಾನ ಮಾಡಿ ಸಾಕಾಗಿ ಹೋಗಿದೆ ಹೋಗಮ್ಮ, ನಾನಿನ್ನು ನಿಂಜೊತೆ ಬರೋದಿಲ್ಲ' ಕೈ ಕೊಸರಿಕೊಂಡ ಮರಿ ಕಾಗೆ ಕೋಪದಿಂದ ಅಮ್ಮನೆಡೆಗೆ ನೋಡಿತು.

ತಾಯಿಕಾಗೆ ಬೇಸರಿಸಿಕೊಳ್ಳದೇ ಅತೀ ಸಮಾಧಾನದಿಂದ ಪುಟಾಣಿಯನ್ನು ಸಂತೈಸುತ್ತಾ ಪ್ರೀತಿಯಿಂದ ಹೇಳಿತು. 'ಪುಟಾಣಿ, ಕೋಪ ಮಾಡ್ಕೋಬೇಡ ಪಕ್ಕದ ಊರಲ್ಲೊಂದು ಪವಿತ್ರ ನದಿ ಇದೆಯಂತೆ ಅಲ್ಲೊಮ್ಮೆ ಹೋಗಿ ಮುಳುಗು ಹಾಕಿ ಬರೋಣವಂತೆ. ಹಾಗೆ ಮಾಡಿದ್ರೆ ನಮ್ಮ ಇಷ್ಟಾರ್ಥ ನೆರವೇರಿದ ಹಾಗೇ ಸೈ! ನಾ ಮಾಡ್ತಿರೋದು ನಿನ್ನ ಒಳ್ಳೇದಕ್ಕೇ ಅಲ್ವೇನೇ ಇದೊಂದು ಸಲ ಅಮ್ಮನ ಮಾತು ಕೇಳು ಪುಟ್ಟೀ, ಬೇಸರ ಮಾಡ್ಕೋಬೇಡ್ವೇ' ಪೂಸಿ ಹೊಡೆಯಿತು.

ಆದರೆ ಮರಿಕಾಗೆಯ ಸಿಟ್ಟು ಮಾತ್ರ ಹಾಗೆಯೇ ಇತ್ತು. 'ಆಯ್ತಮ್ಮ, ನೀ ಹೇಳ್ದಂಗೇ ಅದೂ ಆಗ್ಬಿಡ್ಲಿ